# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 603 |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2024. (ಕಾಲಾವಕಾಶ ಪಡೆಯಲಾದ ಪ್ರಶ್ನೆ) |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮ ಪಂಚಾಯಿತಿಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 28, ನಿಯಮ 28(1), ನಿಯಮ 30(1) ಮತ್ತು ನಿಯಮ 30(7) ರಂತೆ ನಿರ್ವಹಿಸಬೇಕಾದ ರಿಜಿಸ್ಟರ್‌ಗಳು ಯಾವುವು: | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ<br>• ನಿಯಮ – 28(1) ರಂತೆ ನಮೂನೆ- 9 'ತೆರಿಗೆಗೆ ಒಳಪಟ್ಟ ಕಟ್ಟಡ ಮತ್ತು ಭೂಮಿಗೆ ಸಂಬಂಧಿಸಿದ ತೆರಿಗೆ ನಿರ್ಧರಣಾ ಪಟ್ಟಿ'.<br>• ನಿಯಮ – 30(1) ರಂತೆ ನಮೂನೆ- 11ಎ 'ಭೂಮಿ ಮತ್ತು ಕಟ್ಟಡಗಳ ತೆರಿಗೆ ಬಾಬ್ತು ಬೇಡಿಕೆ, ವಸೂಲಾತಿ ಮತ್ತು ಬಾಕಿ ರಿಜಿಸ್ಟರ್'.<br>• ನಿಯಮ- 30(7) ರಂತೆ ನಮೂನೆ – 11ಬಿ 'ತೆರಿಗೆಗೆ ಒಳಪಟ್ಟ ಕ್ರಮಬದ್ಧವಲ್ಲದ ಆಸ್ತಿಗಳ (ನಿವೇಶನ ಮತ್ತು ಕಟ್ಟಡಗಳಿಗೆ) ಸಂಬಂಧಿಸಿದ ತೆರಿಗೆ ನಿರ್ಧರಣಾ ಪಟ್ಟಿ.<br>ರಂತೆ ರಿಜಿಸ್ಟರ್‌ಗಳನ್ನು ನಿರ್ವಹಿಸಬೇಕಾಗಿರುತ್ತದೆ. |
| (ಆ) | ನಿಯಮಗಳಿಗನುಸಾರವಾಗಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿಗಳ ವಿವರ ಮತ್ತು ತೆರಿಗೆಯ ವಿವರಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ರಿಜಿಸ್ಟರ್‌ಗಳಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿದೆಯೇ;<br>ನಿರ್ವಹಿಸುತ್ತಿದ್ದಲ್ಲಿ ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ಇರುವ ಆಸ್ತಿಗಳು ಮತ್ತು ಆಸ್ತಿ ತೆರಿಗೆ ಎಷ್ಟು; (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು). | ನಿಯಮಗಳಿಗನುಸಾರವಾಗಿ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿಗಳ ವಿವರ ಮತ್ತು ತೆರಿಗೆಯ ವಿವರಗಳನ್ನು ಸಂಬಂಧಿಸಿದ ರಿಜಿಸ್ಟರ್ ಗಳಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿರುತ್ತದೆ.<br><br>ಗ್ರಾಮ ಪಂಚಾಯಿತಿ ದಾಖಲೆಗಳನ್ವಯ ರಾಜ್ಯದ ಗ್ರಾಮ ಪಂಚಾಯಿತಿಗಳಿಂದ ಒಟ್ಟು 1,45,57,497 ಆಸ್ತಿಗಳು ಮತ್ತು ಅವುಗಳ ಆಸ್ತಿ ತೆರಿಗೆ ಮೊತ್ತ ₹. 3718,37,03,178 ಇದ್ದು, ಗ್ರಾಮ ಪಂಚಾಯಿತಿವಾರು ವಿವರಗಳನ್ನು ಅನುಬಂಧದಲ್ಲಿ ಪೆನ್ ಡ್ರೈವ್ ಮೂಲಕ ನೀಡಿದೆ. |
| (ಇ) | ಪಂಚತಂತ್ರ ತಂತ್ರಾಂಶದಲ್ಲಿ ಇರುವ ಆಸ್ತಿಗಳು ಮತ್ತು ಆಸ್ತಿ ತೆರಿಗೆ ಎಷ್ಟು; (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು). | • ಪಂಚತಂತ್ರ ತಂತ್ರಾಂಶದಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಒಟ್ಟು 1,40,88,463 ಆಸ್ತಿಗಳು ಮತ್ತು ಅವುಗಳ ಆಸ್ತಿ ತೆರಿಗೆ ₹. 3826,19,14,212 ಇದ್ದು, ಗ್ರಾಮ ಪಂಚಾಯಿತಿವಾರು ವಿವರಗಳನ್ನು ಅನುಬಂಧದಲ್ಲಿ ಪೆನ್ ಡ್ರೈವ್ ಮೂಲಕ ನೀಡಿದೆ.<br><br>• ಗ್ರಾಮ ಪಂಚಾಯಿತಿ ದಾಖಲೆಗಳಲ್ಲಿನ ಆಸ್ತಿಗಳು ಮತ್ತು ಪಂಚತಂತ್ರ |

| | | |
|---|---|---|
| | | ತಂತ್ರಾಂಶದಲ್ಲಿನ ಆಸ್ತಿಗಳ ವಿವರಗಳ ಸಮನ್ವಯತೆಯನ್ನು (Reconcilitaion) (ಬಿಟ್ಟು ಹೋದ ಆಸ್ತಿಗಳನ್ನು ತಂತ್ರಾಂಶದಲ್ಲಿ ಸೇರ್ಪಡೆ ಮಾಡಲು ಮತ್ತು ತಂತ್ರಾಂಶದಲ್ಲಿನ ಪುನರಾವರ್ತಿತ (Duplicate) ಆಸ್ತಿಗಳನ್ನು ಡಿಲೀಟ್ ಮಾಡುವುದು)<br><br>1. ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರದ ಸಂಖ್ಯೆ: ಕಪಂರಾಆ/ಅಭಿವೃದ್ಧಿ/10/2023/E-1068005 ದಿನಾಂಕ: 19.02.2024 ಹಾಗೂ<br>2. ಇ-ಆಡಳಿತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಪತ್ರ ಸಂಖ್ಯೆ: ಗ್ರಾಅಪ/10/ಇ-ಆಡಳಿತ/2023 ದಿನಾಂಕ: 20.12.2023 ರನ್ವಯ ಗ್ರಾಮ ಪಂಚಾಯಿತಿಗಳು ಕ್ರಮ ವಹಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. |
| (ಈ) | ಗ್ರಾಮ ಪಂಚಾಯಿತಿಗಳಲ್ಲಿ ನಿರ್ವಹಿಸುವ ನಿಯಮ-28(1) ಆಸ್ತಿ ವಿವರಗಳ ರಿಜಿಸ್ಟರ್ ಗಳಲ್ಲಿ ಕಂಡು ಬಂದಿರುವ ಕ್ರಮಬದ್ಧ ಮತ್ತು ಕ್ರಮಬದ್ಧವಲ್ಲದ ಆಸ್ತಿಗಳು ಎಷ್ಟು? (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು). | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 28(1) ರಲ್ಲಿ ನಮೂನೆ 9 ('ತೆರಿಗೆಗೆ ಒಳಪಟ್ಟ ಕಟ್ಟಡ ಮತ್ತು ಭೂಮಿಗೆ ಸಂಬಂಧಿಸಿದ ತೆರಿಗೆ ನಿರ್ಧರಣಾ ಪಟ್ಟಿ') ಅನ್ನು ನಿರ್ವಹಣೆ ಮಾಡಬೇಕಾಗಿರುತ್ತದೆ, ಈ ವಹಿಯಲ್ಲಿ 1,14,83,850 ಕ್ರಮಬದ್ಧ ಆಸ್ತಿಗಳಿರುತ್ತವೆ. ಅದೇ ರೀತಿ ನಮೂನೆ 11ಬಿ ರನ್ವಯ 30,73,646 ಕ್ರಮಬದ್ಧವಲ್ಲದ ಆಸ್ತಿಗಳಿದ್ದು ಗ್ರಾಮ ಪಂಚಾಯಿತಿವಾರು ವಿವರವನ್ನು ಅನುಬಂಧದಲ್ಲಿ ಪೆನ್ ಡ್ರೈವ್ ಮೂಲಕ ನೀಡಿದೆ. |

ಸಂಖ್ಯೆ: ಗ್ರಾಅಪ 669 ಗ್ರಾಪಂಅ 2024

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.